ಓ.ಎಸ್ ನಂ. 1/2021 ಪಿ.ಡಬ್ಲೂಃ 1

ದಿನಾಂಕಃ 16.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು ಪ್ರತಿವಾದಿಗಳ ಪರ ಶ್ರೀ. ಎಂ.ಸಿ.ವಿ.ಕೆ. ವಕೀಲರಿಂದ

ಭಾಗಿವಾಳು ಗ್ರಾಮದ ನಂಜುಂಡಪ್ಪರವರ ಮಗ ಬಸವರಾಜು ರವರು ಗೊತ್ತ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ. ಅವರನ್ನು ಊರಿನಲ್ಲಿ ಬಸಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. ಊರಿನಲ್ಲಿ ಆಸ್ತಿ ವಿಚಾರವಾಗಿ ವ್ಯಾಜ್ಯ ಬಂದರೆ ಸದರಿ ಬಸಪ್ಪರವರೇ ರಾಜಿ ಪಂಚಾಯ್ತಿ ಮಾಡಿ ಬಗೆಹರಿಸುತ್ತಾರೆ ಎಂದರೆ ಸರಿ. ನಮ್ಮ ಮನೆಗೆ ಸಂಬಂಧಪಟ್ಟಂತೆ ಆಸ್ತಿ ವಿಚಾರದಲ್ಲಿ ಬಸಪ್ಪ @ ಬಸವರಾಜ್ ರವರು ರಾಜಿ ಪಂಚಾಯ್ತಿ ಮಾಡಿ ಅದರಲ್ಲಿ ಮನೆ ಕಟ್ಟುವ ಸಲುವಾಗಿ 3 ಲಕ್ಷ ಕೊಡುವುದು ಮತ್ತು 1 ಲಕ್ಷ ರೂಪಾಯಿಯ ಬಂಗಾರ ಕೊಡುವುದೆಂದು ತೀರ್ಮಾನ ಮಾಡಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಒಪ್ಪಿ ನಾನು ನಿ.ಡಿ. 1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ. 1 ರಲ್ಲಿ ವರ್ಷ ತಪ್ಪಾಗಿ ಬರೆದಿದ್ದರಿಂದ ಅದನ್ನು ಸರಿಯಪಡಿಸುವ ಸಲುವಾಗಿ ಬಸವರಾಜು ರವರು ಸಾಕಷ್ಟು ಸಾರಿ ನನ್ನನ್ನು ಕರೆದರು ಎಂದರೆ ಸರಿಯಲ್ಲ. ಮೈಸೂರಿನ ಗೌರಿಶಂಕರದಲ್ಲಿರುವ ನನ್ನ ಮನೆ ಬಾಡಿಗೆ ಮನೆ ಇರುತ್ತದೆ. ಸದರಿ ಮನೆಯ ಮಾಲೀಕರು ಸುನೀಲ್ ಎಂದು ಇರುತ್ತಾರೆ. ನಾನು ಬಾಡಿಗೆ ಮನೆಯಲ್ಲಿ ಇದ್ದೇನೆ ಎಂದು ತೋರಿಸಲು ಸದರಿ ಸುನೀಲ್ ರವರನ್ನು ಸಾಕ್ಷಿ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ವಾದ ಪತ್ರದ ಕಾಸ್ ಟೈಟಲ್‌ನಲ್ಲಿ ತೋರಿಸಿರುವ ಮನೆ ನಂ. 32, 1 ನೇ ಕ್ರಾಸ್, ಗೌರಿ ಶಂಕರ ನಗರ, ಊಟಿ ರಸ್ತೆ, ಮೈಸೂರಿನಲ್ಲಿರುವ ಮನೆ ಬಾಡಿಗೆ ಮನೆ ಅಲ್ಲಾ, ಪ್ರತಿವಾದಿಯರು ನನಗೆ ಕೊಟ್ಟಂತಹ 3 ಲಕ್ಷ 10 ಸಾವಿರ ರೂಪಾಯಿಯಲ್ಲಿ ನಾನು ಕಟ್ಟಿಸಿದ ಮನೆ ಎಂದರೆ ಸರಿಯಲ್ಲ. ಬಾಡಿಗೆ ಕರಾರು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಮಲ್ಲಿಕಾರ್ಜುನಯ್ಯ ಎಂದರೆ ನನ್ನ ತಂದೆ. ಕೆ.ಸಿ. ಬಸಪ್ಪ ಎಂದರೆ ನನ್ನ ದೊಡ್ಡಪ್ಪ. ಅರಕಲಗೂಡು ನ್ಯಾಯಾಲಯದಲ್ಲಿ ಓ.ಎಸ್.ನಂ. 146/1997 ರ ಸಿವಿಲ್ ದಾವೆ ನಡೆಯುತ್ತಿದ್ದು, ಅದರಲ್ಲಿ ನಾನು ಸಹಾ ಪಕ್ಷಗಾರರಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಓ.ಎಸ್.ನಂ. 146/1997 ರಲ್ಲಿ ನನ್ನನ್ನು ಮತ್ತು ನನ್ನ ಸಹೋದರ, ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಓ.ಎಸ್.ನಂ. 146/1997 ರಲ್ಲಿ ನಾನು ವಾದಿ ನಂ. 1(ಡಿ) ಎಂದು ಹಾಜರಾಗಿ ತಿದ್ದುಪಡಿ ವಾದ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸಹಿಯನ್ನು ಫೋರ್ಜರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನೇ ತಿದ್ದುಪಡಿ ವಾದ ಪತ್ರಕ್ಕೆ ಸಹಿ ಮಾಡಿಕೊಟ್ಟಿದ್ದರು ಸಹಾ ನ್ಯಾಯಾಲಯಕ್ಕೆ ಹಾಜರಾಗುತ್ತಿಲ್ಲ ಹೀಗಾಗಿ ನನ್ನ ಕಾರಣದಿಂದಲೇ ಆ ದಾವೆಯಲ್ಲಿ ವಿಳಂಬವಾಗುತ್ತಿದೆ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿದ ನಿಪಿ 18 ರಿಂದ 21 ರಲ್ಲಿ ಹೇಳಿರುವ ಎಲ್ಲಾ ಆಸ್ತಿಗಳು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ. 1 ರ ಪ್ರಕಾರ ದಾವಾ ಷೆಡ್ಯೂಲ್ ಕ್ರಮ ಸಂಖ್ಯೆ 1 ನೇ ಆಸ್ತಿ 2ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ: 1 ನೇ ಆಸ್ತಿಯನ್ನು ನನ್ನ ತಾಯಿ 1ನೇ ಪ್ರತಿವಾದಿ 2ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಹೊಸಮನೆ ನಂಜಪ್ಪ ಎಂದರೆ ನನ್ನ ತಾತ. ಕ್ರಮಸಂಖ್ಯೆ: 1 ನೇ ಆಸ್ತಿಯನ್ನು ನನ್ನ ತಾತ ನಂಜಪ್ಪನವರು 1ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ನನ್ನ ತಾತ ಹೊಸಮನೆ ನಂಜಪ್ಪನವರು ಕ್ರಮ ಸಂಖ್ಯೆ : 2 ರಿಂದ 8ನೇ ಆಸ್ತಿಗಳನ್ನು ಮೃತ ನನ್ನ ಸಹೋದರ ಗುರುಮಲ್ಲೇಶ ರವರ ಹೆಸರಿಗೆ ಕುಟುಂಬ ವ್ಯವಸ್ಥ ಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾತ ಗುರುಮಲ್ಲೇಶ ರವರನ್ನು ದತ್ತು ತೆಗೆದುಕೊಂಡಿದ್ದರು

ಎಂದು ನುಡಿಯುತ್ತಾರೆ. ಗುರು ಮಲ್ಲೇಶ್ ರವರಿಗೆ ಮದುವೆಯಾಗಿರಲಿಲ್ಲ, ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ಗುರು ಮಲ್ಲೇಶ ತೀರಿಕೊಂಡ ನಂತರ ಕ್ರಮ ಸಂಖ್ಯೆ: 2 ರಿಂದ 8 ನೇ ಆಸ್ತಿಗಳನ್ನು ನಾನು ಹಾಗೂ ಪ್ರತಿವಾದಿಯರು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಸಂಬಂಧವೇ ನಾನು ಪ್ರತಿವಾದಿರಿಂದ 3 ಲಕ್ಷ ರೂಪಾಯಿ ಹಾಗೂ ಚಿನ್ನ ಪಡೆದು ನನ್ನ ಹಕ್ಕನ್ನು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಹೀಗಾಗಿ ನಿ.ಡಿ. 1 ಬರೆದುಕೊಟ್ಟ ನಂತರವೇ 1ನೇ ಪ್ರತಿವಾದಿ ಕ್ರಮಸಂಖ್ಯೆ: 1 ನೇ ಆಸ್ತಿಯನ್ನು 2ನೇ ಪ್ರತಿವಾದಿ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಕ್ರಮ ಸಂಖ್ಯೆ 1 ಮತ್ತು 2 ಕ್ಕೆ ಸಂಬಂಧಿಸಿದಂತೆ 2 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಕನ್ನಡ ಓದಲು ಸರಿಯಾಗಿ ಬರುವುದಿಲ್ಲ. ದಾನಪತ್ರಕ್ಕೆ ಬಸವರಾಜು ರವರೇ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾನಪತ್ರವನ್ನು ಬರೆದುಕೊಟ್ಟನಂತರ 2 ಮತ್ತು 3ನೇ ಪ್ರತಿವಾದಿಗಳು ತಮ್ಮ ತಮ್ಮಲ್ಲಿ ವಿಭಾಗ ಮಾಡಿಕೊಂಡು ಅವರ ಅವರ ಹಿಸ್ಸೆಗಳಲ್ಲಿ ಸ್ವಾಧೀನ ಅನುಭವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಬಾಗಿವಾಳು ಗ್ರಾಮಕ್ಕೆ ಹಬ್ಬ ಎಂದರೆ ಯುಗಾದಿಯ ಬಿಂದಿಗೆಯ ಜಾತ್ರೆಗೆ ಬರುತ್ತೇನೆ ಎಂದರೆ ಸರಿ. ನಾನು ಹಬ್ಬ ಹರಿದಿನಕ್ಕೆ ಬಾಗಿವಾಳು ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದರಿಂದ ವಿಭಾಗ ವಿಷಯಗಳು ಹಾಗೂ ದಾನ ಪತ್ರದ ವಿಷಯಗಳು ಗೊತ್ತಿದ್ದರು ಸಹಾ ಪ್ರತಿವಾದಿಗಳಿಗೆ ವಿನಾ ಕಾರಣ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಸಮಯಕ್ಕೆ ದಾವಾ ಆಸ್ತಿಗಳ ಚೆಕ್‌ಬಂಧಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ರಾಜಿ ಪಂಚಾಯ್ತಿ ಪ್ರಕಾರ 3 ಲಕ್ಷ ಹಣ ಮತ್ತು ಚಿನ್ನವನ್ನು ಪಡೆದುಕೊಂಡಿದ್ದು ಆಸ್ತಿಯ ಸ್ವಾಧೀನಗಳಲ್ಲಿ 2 ಮತ್ತು 3ನೇ ಪ್ರತಿವಾದಿಯರೇ ಇದ್ದುದ್ದರಿಂದ ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಹೀಗಾಗಿ ಅವುಗಳ ಚೆಕ್‌ಬಂಧಿಯನ್ನು ದಾವಾ ಆಸ್ತಿಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

ಪಂಚಾಯ್ತಿದಾರರ ಸಮಕ್ಷಮ 1 ನೇ ಪ್ರತಿವಾದಿಯರನ್ನು ಆಸ್ತಿಯಲ್ಲಿ ಪಾಲುಕೊಡುವಂತೆ ಕೇಳಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಆಸ್ತಿ ಕೇಳಲು ಹೋದಾಗ ಛೇರ್‌ಮನ್ ಬಸವರಾಜು ಹಾಗೂ ನಮ್ಮ ಮನೆಯ ಜನರು ಮಾತ್ರ ಇದ್ದರು. ಬಸವರಾಜು ರವರೇ ರಾಜಿ ಪಂಚಾಯ್ತಿ ನನಗೆ ಹಣ ಮತ್ತು ಚಿನ್ನವನ್ನು ಕೊಡಿಸಿದ್ದು, ಮತ್ತೆ ನಾನು ಯಾವುದೇ ಆಸ್ತಿಯನ್ನು ಕೇಳಲು ಹೋಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಖಾತೆಯು ಪ್ರತಿವಾದಿಯರ ಹೆಸರಿಗೆ ಬದಲಾವಣೆ ಆಗುವ ಸಮಯಕ್ಕೆ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ತಕರಾರು ಅರ್ಜಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ಯಾವುದೇ ಖಾತೆ ಬದಲಾವಣೆ ಆಗಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ನಿ.ಪಿ. 1 ರಿಂದ 17 ರ ಪ್ರಕಾರ ಎಲ್ಲಾ ಖಾತೆಗಳು ವರ್ಗಾವಣೆ ಆಗಿದ್ದು, ಅವುಗಳ ಪ್ರಕಾರ ಪ್ರತಿವಾದಿಯರು ಸ್ವಾಧೀನ ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 4 ನೇ ಆಸ್ತಿಯಲ್ಲಿ ನಿ.ಪಿ. 8 ಮತ್ತು 9 ರ ಪ್ರಕಾರ 2 ಮತ್ತು 3 ನೇ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳಲ್ಲದೇ ಬಾಗಿವಾಳು ಗ್ರಾಮದಲ್ಲಿ ಊರ ಹೊರಗೆ ಇನ್ನೊಂದು ಮನೆ ಇದೆ ಎಂದರೆ ಸರಿ. ದಾವಾ ಆಸ್ತಿಗಳು, ನಿಪಿ 4 ನೇ ಆಸ್ತಿಯಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಕಟ್ಟಿಕೊಂಡಂತಹ ಮನೆಗಳು ಹಾಗೂ ಬಾಗಿವಾಳು ಗ್ರಾಮದಲ್ಲಿಯ ಹಳೆಯ ಮನೆ ಪ್ರತಿವಾದಿಗಳ ಹಿಸ್ಸೆಗೆ ಹೋಗಿದ್ದು, ನನಗೆ ಆಸ್ತಿಯ ಬದಲಾಗಿ 3 ಲಕ್ಷ ರೂಪಾಯಿ ಹಾಗೂ ಚಿನ್ನ ಬಂದಿರುವ ವಿಷಯ ನಿಜವಾಗಿದ್ದರು ಸಹಾ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನ ವಾರಸುದಾರರನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅವರ ಅವರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಅರಕಲಗೂಡು ತಾಲ್ಲೂಕು, ಬೇಡಿ ಕರ್ಪೂರವಳ್ಳಿ ಗ್ರಾಮದಲ್ಲಿಯ ನನ್ನ ತಂದೆಯ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅವುಗಳ ಬಗ್ಗೆ ನನಗೆ ಯಾವುದೇ ಮಾಹಿತಿ

ಇರುವುದಿಲ್ಲ ಎಂದು ನುಡಿಯುತ್ತಾರೆ. ಕ್ರಮ ಸಂಖ್ಯೆ : 1 ನೇ ಆಸ್ತಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಿಸ್ಸೆಯ ಬದಲಾಗಿ ಹಣ ಮತ್ತು ಒಡವೆಯನ್ನು ಪಡೆದಿದ್ದರು ಸಹಾ ಪ್ರತಿವಾದಿಯರಿಗೆ ಅವಮಾನ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.